ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**S.C. No. 139/2019**

| ಸಾಕ್ಷಿಯ ಹೆಸರು | ಶ್ರೀ. ಸೋಮಶೇಖರ್ | ಚಾಸಾಃ | ಪ್ರಾಸಾಃ |
|---|---|---|---|
| ತಂದೆಯ ಹೆಸರು | ಲಕ್ಷ್ಮಣ್ ಗೌಡ | 14 | 9 |
| ವಯಸ್ಸು | 46 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **01.04.2026.** | |
| ಉದ್ಯೋಗ | High way toll in-charge | | |
| ವಾಸ ಸ್ಥಳ | ಸಿ ಬಂಗಲಿ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನಾನು 2014 ರಿಂದ ಇಲ್ಲಿಯವರೆಗೆ ಹಿರಿಸಾವೆ ಟೋಲ್ ನಲ್ಲಿ ಕೆಲಸ ಮಾಡುತ್ತಿದ್ದೇನೆ. ಮಾದಲು ಶಾಂತಿ ಗ್ರಾಮ ಟೋಲ್ ನಲ್ಲಿ ಕೆಲಸ ಮಾಡುತ್ತಿದ್ದೆ. ದಿನಾಂಕ 20.08.2018 ರಂದು ವರ್ತೂರು ಪೊಲೀಸರು ನಮ್ಮ ಟೋಲ್ ಗೆ ಮನವಿಯನ್ನು ನೀಡಿ KA-03/AE-2652 ವಾಹನ ಕೊಲೆ ಪ್ರಕರಣಕ್ಕೆ ಸಂಬಂಧಪಟ್ಟಿದ್ದು ನಮ್ಮ ಟೋಲ್ ನಲ್ಲಿ ದಿನಾಂಕ 20.08.2018 ರಂದು ಹೋಗಿದೆಯೇ ಎಂದು ಮಾಹಿತಿ ಕೇಳಿದ್ದರು. ಸದರಿ ಮನವಿ ಪತ್ರವನ್ನು ನಿಶಾನೆ.ಪಿ. 44 ಎಂದು ಗುರುತಿಸಲಾಯಿತು. ಆ ಪ್ರಕಾರ ನಾನು ಸದರಿ ವಾಹನ ನಮ್ಮ ಟೋಲ್ ನಲ್ಲಿ ಹಾದು ಹೋಗಿದೆ ಎಂದು ಪರಿಶೀಲನೆ ಮಾಡಿ ಆ ಬಗ್ಗೆ ಒಂದು ಫೋಟೋವನ್ನು ನೀಡಿದ್ದು, ಕಲಂ. 65 ರೀತಿ ದೃಡೀಕರಣ ಪತ್ರವನ್ನು ನೀಡಿದ್ದೇನೆ. ಫೋಟೋವನ್ನು ನಿಶಾನೆ.ಪಿ. 45 ಹಾಗೂ ಕಲಂ. 65 ರೀತಿ ದೃಡೀಕರಣವನ್ನು ನಿಶಾನೆ.ಪಿ. 46 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 46 (ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. **MRM** ವಕೀಲರಿಂದ :

1. ನಾನು ಪಧವಿದರ. ನಾನು ಆ ದಿನ ಎಷ್ಟು ಗಂಟೆಗೆ ಲಾಗಿನ್ ಆಗಿದ್ದೇನೆ ಹಾಗೂ ಎಷ್ಟು ಗಂಟೆಗೆ ಲಾಗೌಟ್ ಆಗಿದ್ದೇನ ಎಂದು ನೆನಪು ಇಲ್ಲ. ನನ್ನ ಹಾಜರಾತಿ ದೃಡೀಕರಣ ಪತ್ರವನ್ನು ತನಿಖಾಧಿಕಾರಿ ಕೇಳಿಲ್ಲ. ನಮ್ಮ system ಯಾವ ವರ್ಷದಲ್ಲಿ ತಯಾರು ಆಗಿತ್ತು, ಯಾವ ಕಂಪನಿಯದ್ದು ನಿಶಾನೆ. 46 ಅಲ್ಲಿ ನಮೂದು ಮಾಡಿಲ್ಲ. ನಾನು ನಿಶಾನೆ.ಪಿ 46 ರಲ್ಲಿ ಸದರಿ ವಾಹನ ಯಾವುದು ಹಾಗೂ ಎಷ್ಟು

ಗಂಟೆಗೆ ಟೋಲ್ ಪಾಸ್ ಆಗಿತ್ತು ನಮೂದು ಮಾಡಿಲ್ಲ. ಪಾಸ್ಟ್ ಟ್ಯಾಗ್ ಬಗ್ಗೆ ನಮೂದು ಮಾಡಿಲ್ಲ. ಎಷ್ಟು ಹಣ ಕಟ್ ಆಗಿದೆ ಎಂದು ನಮೂದು ಮಾಡಿಲ್ಲ. ಆ device ನಾನು ಮಾಲೀಕ ನಾನು ಅಲ್ಲ ಆದರೆ ಅದನ್ನು ನಾನೇ ನಿರ್ವಹಣೆ ಮಾಡುವುದು. ನಿಶಾನೆ.ಪಿ. 46 ರಲ್ಲಿ ಅದರ ಬಗ್ಗೆ ನಮೂದು ಮಾಡಿಲ್ಲ. ನಾನು ಅಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಗುರುತಿನ ಚೀಟಿ ನೀಡಿಲ್ಲ.

2. ಪೊಲೀಸರು ಕಾರ್ ಫೋಟೊ ತೆಗೆದುಕೊಂಡಾಗ ಮಹಜರ್ ಮಾಡಿಲ್ಲ. ಆ ಕಾರನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ಗುರುತಿಸಲು ಆಗುವುದಿಲ್ಲ ಎಂದರೆ ಸರಿ. ನಿಶಾನೆ.ಪಿ. 45 ಫೋಟೋದಲ್ಲಿ ಅದು ಯಾವ ಟೋಲ್ ನಲ್ಲಿ ಹಾಗೂ ಯಾವ ಲೇನ್ ನಲ್ಲಿ ಹೋಗಿದೆ ಎಂದು ನಮೂದು ಆಗಿಲ್ಲ ಎಂದರೆ ಸರಿ. ನಿಶಾನೆ.ಪಿ. 46 ಅನ್ನು ಪೊಲೀಸರು ತಯಾರು ಮಾಡಿದ್ದು. ಅದನ್ನು ಪೊಲೀಸರು ಯಾವ ತಯಾರು ಮಾಡಿ ನನಗೆ ನೀಡಿದ್ದರು ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಕಾರಿನ ಸಂಖ್ಯೆ ಸಿ.ಡಿ ಸಂಖ್ಯೆ ಮತ್ತು ಎಸ್.ಡಿ. ಕಾರ್ಡ ಸಂಖ್ಯೆ ನಮುದು ಮಾಡಿಲ್ಲ ಎಂದರೆ ಸರಿ. ನಾನು ನಿಶಾನೆ.ಪಿ. 46 ರಲ್ಲಿ ಮಾಹಿತಿಯ್ನು ಕೈಯಿಂದ ಭರ್ತಿ ಮಾಡಿರುತ್ತೇನೆ, ಉಳಿದ ಮಾಹಿತಿ ನನಗೆ ಗೊತ್ತಿಲ್ಲ. ಪೊಲೀಸರ ಮಾತನ್ನು ಕೇಳಿ ಸುಳ್ಳು ದಾಖಲೆ ನೀಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಮತ್ತು ಆ ಕಾರು ನಮ್ಮ ಟೋಲ್ ನಲ್ಲಿ ಹೋಗಿಲ್ಲ ಎಂದರೆ ಸರಿ ಅಲ್ಲ.

ಮರು ವಿಚಾರಣೆ ಇಲ್ಲ

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.